(ಆ) ಬೆಂಗಳೂರು-ಮಿರಜ್ ರೈಲು ಮಾರ್ಗದ ಮೀಟರ್‌ಗೇಜನ್ನು ಬ್ರಾಡ್‌ಗೇಜ್‌ಗೆ ಪರಿವರ್ತಿಸಲು ಸಮೀಕ್ಷೆಯನ್ನು ರೈಲ್ವೆಯವರು ೮೦-೮೧ರಲ್ಲಿ ಕೈಗೆತ್ತಿಕೊಂಡು ೧೯೪೪ರಲ್ಲಿ ಮುಗಿಸಿದರು. ಈ ಯೋಜನೆಯು ಆರ್ಥಿಕವಾಗಿ ಲಾಭದಾಯಕವಾಗಿಲ್ಲವಾದ್ದರಿಂದ ಈ ಪರಿವರ್ತನೆಯನ್ನು ಫಲನೆಯ ಯೋಜನೆಯಲ್ಲಿ ತೆಗೆದುಕೊಳ್ಳಲು ಸಾಧ್ಯವಿಲ್ಲವೆಂದು ಕೇಂದ್ರ ಸರ್ಕಾರದವರು ತಿಳಿಸಿದ್ದಾರೆ. ಈ ಮಾರ್ಗವನ್ನು ವಿದ್ಯುತ್ ರೈಲನ್ನಾಗಿ ಪರಿವರ್ತಿಸುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರದವರು ಬ್ರಾಡ್‌ಗೇಜನ್ನು ಮಾಡಲು ಒಪ್ಪಿದ ಮೇಲೆ ತೆಗೆದುಕೊಳ್ಳಲಾಗುವುದು.

ಸಾಗರ ತಾಲ್ಲೂಕಿನ ಪ್ರಾಥಮಿಕ ಶಾಲೆಗಳಲ್ಲಿ ಉಪಾಧ್ಯಾಯರ ಕೊರತೆಯ ಬಗ್ಗೆ

೧೬೯ (೫೨೭) ಶ್ರೀ ಬಿ. ಧರ್ಮಪ್ಪ (ಸಾಗರ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

(ಆ) ಸಾಗರ ತಾಲ್ಲೂಕಿನಲ್ಲಿನ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿದ್ದು ಹಾಗೂ ಹೊಸದಾಗಿ ಶಾಲೆಗಳನ್ನು ಸಹ ಪ್ರಾರಂಭಿಸಿರುವುದರಿಂದ ಅಲ್ಲಿಗೆ ಸುಮಾರು ೫೦ ರಿಂದ ೬೦ ಉಪಾಧ್ಯಾಯರು ಬೇಕಾಗಿರುವರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

(ಆ) ಕಳೆದ ವರ್ಷದಿಂದ ಜಿಲ್ಲಾ ನೇಮಕಾತಿ ಸಮಿತಿಗಳನ್ನು ರಚಿಸುತ್ತೇವೆಂದು ಹೇಳಿ, ಇನ್ನೂ ರಚಿಸದೇ ಈಗಾಗಲೇ ಖಾಲಿ ಇರುವ ಜಾಗಗಳಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಶಾಲೆಗಳು ನಡೆಯಲು ಅವಕಾಶವಿಲ್ಲದಂತಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

(ಇ) ಹಾಗಿದ್ದಲ್ಲಿ ಸರ್ಕಾರದವರು ಕೂಡಲೇ ಹಂಗಾಮಿ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳಲು ಸಹಾಯಕ ವಿದ್ಯಾಧಿಕಾರಿಗಳಿಗೆ ಆಜ್ಞೆ ಮಾಡಿ ಶಾಲೆಗಳು ನಡೆಯುವಂತಾಗಲು ಕ್ರಮ ತೆಗೆದುಕೊಳ್ಳಲಾಗುವುದೆ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

(ಆ) ಹೌದು.

(ಆ) ಜಿಲ್ಲಾ ಆಯ್ಕೆ ಸಮಿತಿಗಳ ರಚನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಖಾಲಿ ಇರುವ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲಿನ ಅಭ್ಯರ್ಥಿಗಳಿಂದ ತುಂಬಿ ಶಾಲೆಗಳನ್ನು ನಡೆಸಲು ಕ್ರಮ ತೆಗೆದುಕೊಳ್ಳಲಾಗಿದೆ.

(ಇ) ಜಿಲ್ಲಾ ಆಯ್ಕೆ ಸಮಿತಿಗಳ ಮೂಲಕ ಶಿಕ್ಷಕರ ನೇಮಕಾತಿ ನಡೆಸಲು ವ್ಯವಸ್ಥೆ ಮಾಡಲಾಗುತ್ತಿದ್ದು ಶಿಕ್ಷಕರ ನೇಮಕಾತಿ ತೀಕ್ಷ್ರವಾಗಿಯೇ ಮಾಡಲಾಗುವುದು.

ಮಿಲ್ಸನ್ ಗಾರ್ಡನ್ ಹಾಗೂ ರಾಜಾಜಿನಗರದಲ್ಲಿರುವ ಲೋಕೋಪಯೋಗಿ ಇಲಾಖೆ ನೌಕರರ ವಸತಿ ಗೃಹಗಳ ಬಗ್ಗೆ

೧೭೦ (೫೬೬) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಲೋಕೋಪಯೋಗಿ, ಆಡಳಿತ ಪುನರ್ವಸತಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

(ಆ) ೧೯೪೪ರಿಂದ ಇದುವರೆವಿಗೂ ಸರ್ಕಾರಿ ನೌಕರರಿಂದ ಮಿಲ್ಸನ್ ಗಾರ್ಡನ್ ಹಾಗೂ ರಾಜಾಜಿನಗರದಲ್ಲಿರುವ ಲೋಕೋಪಯೋಗಿ ಇಲಾಖೆ ವಸತಿ ಗೃಹಗಳಿಗೆ ಹಂಚಿಕೆ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು?

(ಆ) ಹಾಗಿದ್ದಲ್ಲಿ ಸದರಿ ಅರ್ಜಿಗಳಲ್ಲಿ ಎಷ್ಟು ವಸತಿಗಳನ್ನು ಹಂಚಿಕೆಯಾಗಿದೆ ಹಾಗೂ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು?

(ಇ) ಹಾಗಿದ್ದಲ್ಲಿ ಸದರಿ ವಸತಿ ಗೃಹಗಳನ್ನು ಹಂಚುವಾಗ ಅನುಸರಿಸಿದ ನಿಯಮಾವಳಿಗಳಾವುವು? (ಸದರಿ ಪಟ್ಟಿ ಒದಗಿಸುವುದು)

(ಈ) ಸದರಿ ಗೃಹಗಳನ್ನು ಹಂಚುವ ಸಂದರ್ಭದಲ್ಲಿ ವಿಶೇಷ ಆದ್ಯತೆ ಕೊಡುವ ಬಗ್ಗೆ ಏನಾದರೂ ನಿಯಮಾವಳಿ ಇರುವುದೇ?

ಬ) ಹಾಗಿದ್ದಲ್ಲಿ ಈ ರೀತಿ ಹಂಚಿಕೆ ಮಾಡಲಾಗಿರುವ ಪಟ್ಟಿಯನ್ನು ಪೆಸರು, ಆಲಾಪೆಯ ಪೆಸರು, ಸಂಪೂರ್ಣ ವಿಳಾಸ ಒದಗಿಸುವುದು?

ಊ) ಹಾಲಿ ಸದರಿ ಗೃಹಗಳಲ್ಲಿರುವವರು ಗೃಹ ನಿರ್ಮಾಣ ಮುಂಗಡ ಹಣ ಪಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗೂ ಇತರವರು ಅದೇ ವಸತಿ ಗೃಹಗಳಲ್ಲಿ ವಾಸಿಸುತ್ತಿದ್ದು ಅಂತಹವರ ಮೇಲೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು).—

ಅ) ವಿಲ್ಸನ್ ಗಾರ್ಡನ್ ಹಾಗೂ ರಾಜಾಜಿನಗರದಲ್ಲಿರುವ ಲೋಕೋಪಯೋಗಿ ಇಲಾಖೆ ವಸತಿ ಗೃಹಗಳಿಗೆ ಹಂಚಿಕೆ ಕೋರಿ ೩೪೦೬ ಅರ್ಜಿಗಳು ಬಂದಿರುತ್ತವೆ.

ಆ) ಇದುವರೆವಿಗೂ ರಾಜಾಜಿನಗರ ಹಾಗೂ ವಿಲ್ಸನ್ ಗಾರ್ಡನ್‌ನಲ್ಲಿ ೧೫೫ ವಸತಿ ಗೃಹಗಳು ಮಾತ್ರ ತೆರವು ಆಗಿದ್ದು ಅಷ್ಟನ್ನು ಪೂರ್ತಿ ಹಂಚಲಾಗಿದೆ. ೩೪೦೬ ಸ್ವೀಕೃತವಾದ ಅರ್ಜಿಗಳಲ್ಲಿ ೧೧೦೪ ಅಭ್ಯರ್ಥಿಗಳು ನಿಯಮಾನುಸಾರ ಅರ್ಹರಿಲ್ಲದ ಕಾರಣ ಅವರ ಅರ್ಜಿಗಳನ್ನು ತಿರಸ್ಕರಿಸಲಾಯಿತು. ಹಾಗೂ ೧೭ ಅಭ್ಯರ್ಥಿಗಳಿಗೆ ಯಲಹಂಕ ವಸತಿ ಗೃಹಗಳನ್ನು ಹಂಚಲಾಯಿತು. ಇನ್ನೂ ಉಳಿದಿರುವ ಅರ್ಜಿಗಳ ಸಂಖ್ಯೆ ೨೨೭೦.

ಇ) ಆರ್.ಹೆಚ್.ಎಸ್. ಅಲಾಟ್‌ಮೆಂಟ್ ಕಮಿಟಿಯು ನಿರ್ಣಯದ ಪ್ರಕಾರ ಸರ್ಕಾರಿ ವಸತಿ ಗೃಹ ಹಂಚುವಿಕೆಗಾಗಿ ಅರ್ಜಿಗಳನ್ನು ಕರೆಯಲಾಗಿತ್ತು ಮತ್ತು ಅರ್ಜಿಗಳನ್ನು ಸಲ್ಲಿಸಲು ದಿನಾಂಕ ೫ನೇ ನವೆಂಬರ್ ೧೯೮೫ ಕಡೆಯ ದಿನವೆಂದು ನಿಗದಿ ಪಡಿಸಲಾಗಿತ್ತು. ಈ ರೀತಿ ಸ್ವೀಕರಿಸಲಾದ ಅರ್ಜಿಗಳು ೩೪೦೬. ಅವುಗಳಲ್ಲಿ ೧೧೦೪ ಅಭ್ಯರ್ಥಿಗಳು ನಿಯಮಾನುಸಾರ ಅರ್ಹತೆಯಿಲ್ಲದ ಕಾರಣ ಅವರ ಅರ್ಜಿಗಳು ತಿರಸ್ಕೃತವಾದವು. ಮಿಕ್ಕ ಸ್ವೀಕೃತ ಅರ್ಜಿಗಳನ್ನು ಆರ್. ಹೆಚ್. ಎಸ್. ನಿಯಮಾವಳಿ ನಿಯಮ ೧೫ರಲ್ಲಿ ಸೂಚಿಸಿರುವ ವಿಧಾನಸಾತಿ ಪ್ರಕಾರ ವರ್ಗಾನುಸಾರ ಬೇರೆ ಬೇರೆ ಪಟ್ಟಿಗಳನ್ನು ತಯಾರಿಸಲಾಗಿದೆ. ಅರ್ಜಿಗಳನ್ನು ನಿಗದಿತ ದಿನಾಂಕದೊಳಗಾಗಿ ಸ್ವೀಕರಿಸಿರುವುದರಿಂದ ಬೇರೆ ಪರಿಷ್ಕೃತ ಪಟ್ಟಿಯನ್ನು ತಯಾರಿಸಿಲ್ಲ. ಕಾಲಕಾಲಕ್ಕೆ ಆರ್.ಹೆಚ್.ಎಸ್. ಹಂಚುವ ಸಮಿತಿ ಸೇರಿ ಆಯ್ಕೆ ಪಟ್ಟಿ ಮತ್ತು ನಿರೀಕ್ಷಣಾ ಪಟ್ಟಿ ತಯಾರಿಸುತ್ತದೆ. ವಸತಿ ಗೃಹಗಳು ಖಾಲಿಯಾದಾಗ ಪಟ್ಟಿಯಾನುಸಾರ ಮನೆ ಹಂಚಿಕೆಯಾಗುವುದು.

ಈ) ಹೌದು. ಮನೆ ಹಂಚುವಿಕೆ ನಿಯಮಾವಳಿ ನಿಯಮ ೧೪ರ ಪ್ರಕಾರ ಅಸಾಧಾರಣ ಪ್ರಕರಣಗಳಲ್ಲಿ ಸರ್ಕಾರದ ನಿರ್ದೇಶನದ ಮೇಲೆ ಸದರಿ ವಸತಿ ಗೃಹಗಳನ್ನು ಹಂಚುವ ಸಂದರ್ಭದಲ್ಲಿ ವಿಶೇಷ ಆದ್ಯತೆ ಕೊಡಲಾಗುತ್ತಿದೆ.

ಉ) ಈವರೆವಿಗೂ ಈ ರೀತಿ ಹಂಚಿರುವ ಸರ್ಕಾರಿ ನೌಕರರ ಪಟ್ಟಿಯನ್ನು ಲಗತ್ತಿಸಿದೆ (ಅಡಕ ೧)

ಊ) ಬಂದಿರುತ್ತದೆ. ಗೃಹ ನಿರ್ಮಾಣ ಮುಂಗಡ ಹಣವನ್ನು ಪಡೆದು ಮನೆ ಕಟ್ಟಿ ಮುಗಿಸಿ ಸರ್ಕಾರಿ ಗೃಹಗಳಲ್ಲೇ ವಾಸವಾಗಿರುವುದು ಸರ್ಕಾರದ ಗಮನಕ್ಕೆ ಬಂದ ಕೂಡಲೆ ಕಾನೂನಿನ ರೀತ್ಯ ಕ್ರಮ ತೆಗೆದುಕೊಂಡು ತೆರವು ಮಾಡಿಸಲಾಗುತ್ತಿದೆ.

ANNEXURE—I

GOVERNMENT DIRECTION

Sl. No.	Name and Address	Quarter allotted
1	Sri G.M. Sannamuddaiah, Dalayat, DPAR, Vidhana Soudha	Rajajinagar
2	Sri D.A. Lakshminarayanappa, P.A. to Minister for Co-operation	Jayanagar
3	Sri Nisath Mahamed, P.A. to Speaker	Wilsongarden
4	Sri Nanjundegowda, Room Boy. L.H.	do
5	Sri Prakesh Kesarkar, Asst., PWD, V.S.	Rajajinagar
6	Sri Nagasubramanyam, Jamedar, Chief Secretary Establishment, Vidhana Soudha	Wilsongarden
7	Sri B.K. Vasudeva Rao, JWI, No.2, Bldgs. Sub-Dn. Vidhana Soudha	Wilsongarden
8	Sri Bheema Rao, Driver, SE SVC	do
9	Sri N.K. Ashalatha, Jr. Asst., KPSC	Rajajinagar
10	Smt. S. Uma, Typist, Tahasildar office	Wilsongarden
11	Sri D.A. Narasimhamurthy, Watch & Ward DPAR, Vidhana Soudha	do
12	Sri Dwarakanath, PA to Minister for Health	do
13	Sri R. Jagadeesh, Compositor, Govt. Press	do
14	Sri T. Gundappa, Driver, Minister for Large & Medium	Rajajinagar
15	Sri P. Somanna, Asst., PWD, Vidhana Soudha	Wilsongarden
16	Sri Revanna Siddaiah, PA to Chairman, PSC	do
17	Smt. Zeenith Unnisa, Teacher, VKO Primary Boys School, Shivajinagar, Bangalore	do
18	Sri S. Srikanth, Steno Personal Establishment of Secretary II PW CAD & Elecy. Department. Vidhana Soudha	do
19	Sri G.S. Prakash, Jr. Asst., PW CAD & Elecy. Department, Vidhana Soudha	do
20	Smt. Vimalabalakrishna. FDC, Small Causes Court, Bangalore	do